# ಕುವೆಂಪು ವಿಶ್ವವಿದ್ಯಾಲಯ

ನಿರ್ದೇಶಕರ ಕಾರ್ಯಾಲಯ,
ದೂರ ಶಿಕ್ಷಣ ನಿರ್ದೇಶನಾಲಯ

ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577451, ಶಿವಮೊಗ್ಗ ಜಿಲ್ಲೆ, ಕರ್ನಾಟಕ
ದೂರವಾಣಿ : 08282 256450, 256246

ಸಂಖ್ಯೆ: ಕುವಿ/ದೂಶಿನಿ-02/2019-20/1747 ದಿನಾಂಕ: 14.10.2019

## ಸುತ್ತೋಲೆ

ವಿಷಯ:– 2018–19ನೇ ಸಾಲಿನ ಓರಿಯಂಟೇಷನ್/ ಸಂಪರ್ಕ ತರಗತಿಗಳು ಹಾಗೂ ಪ್ರಾಯೋಗಿಕ ತರಗತಿಗಳ ವೇಳಾಪಟ್ಟಿ ಮತ್ತು ಪ್ರಾಯೋಗಿಕ ಪರೀಕ್ಷೆಗಳ ವೇಳಾಪಟ್ಟಿಯ ಕುರಿತು.

–**–

ಕುವೆಂಪು ವಿಶ್ವವಿದ್ಯಾಲಯ ದೂರ ಶಿಕ್ಷಣ ನಿರ್ದೇಶನಾಲಯದ ಎಲ್ಲಾ ಅಧ್ಯಯನ ಕೇಂದ್ರಗಳ ಕೋ–ಆರ್ಡಿನೇಟರ್/ ಕೋರ್ಸ್ ಕೋ–ಆರ್ಡಿನೇಟರ್/ ಸಂಚಾಲಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, 2018–19ನೇ ಸಾಲಿಗೆ ತಮ್ಮ ಅಧ್ಯಯನ ಕೇಂದ್ರಗಳಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳನ್ನು ಪ್ರಸಕ್ತ ಸಾಲಿನ ಅಕ್ಟೋಬರ್/ನವೆಂಬರ್ ಮಾಹೆಯಲ್ಲಿ ನಡೆಸುವ ಸಂಬಂಧ ವಿಶ್ವವಿದ್ಯಾಲಯ ನಿಗದಿಪಡಿಸಿರುವ ಷರತ್ತುಗಳನ್ವಯ ಕಡ್ಡಾಯವಾಗಿ ನಡೆಸಬೇಕಾಗಿರುತ್ತದೆ.

### ಅ. ಮುಖ್ಯವಾದ ಸೂಚನೆಗಳು:

1. ಕೋ–ಆರ್ಡಿನೇಟರ್/ ಕೋರ್ಸ್ ಕೋ–ಆರ್ಡಿನೇಟರ್/ ಸಂಚಾಲಕರು ತಮ್ಮ ಅಧ್ಯಯನ ಕೇಂದ್ರದಲ್ಲಿ ಪ್ರವೇಶ ಪಡೆದಂತಹ ಸ್ನಾತಕ (ದ್ವಿತೀಯ/ ತೃತೀಯ) ಹಾಗೂ ಸ್ನಾತಕೋತ್ತರ (ದ್ವಿತೀಯ) ಪದವಿಗೆ ಸಂಬಂಧಿಸಿದ ಎಲ್ಲಾ ವಿದ್ಯಾರ್ಥಿಗಳ ಪ್ರವೇಶ ಅರ್ಜಿಗಳನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸಿ, ಅನುಮೋದನೆಗೊಂಡ ನಂತರ ವಿಶ್ವವಿದ್ಯಾಲಯದ ಪೂರ್ವಾನುಮತಿ ಪಡೆದು, ತಮ್ಮ ತಮ್ಮ ಅಧ್ಯಯನ ಕೇಂದ್ರಗಳಲ್ಲಿ ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳನ್ನು ಪ್ರಾರಂಭಿಸಬೇಕಾಗಿರುತ್ತದೆ.
2. ಆದರೆ, ಯಾವುದೇ ವಿದ್ಯಾರ್ಥಿಯ ಪ್ರವೇಶ ನೋಂದಣಿಯು ದೂರ ಶಿಕ್ಷಣ ನಿರ್ದೇಶನಾಲಯದಿಂದ ಅನುಮೋದನೆಯಾಗದೆ, ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳಿಗೆ ಭಾಗವಹಿಸಲು ಅನುಮತಿಸುವಂತಿಲ್ಲ. ತಪ್ಪಿದಲ್ಲಿ, ದೂರ ಶಿಕ್ಷಣ ನಿರ್ದೇಶನಾಲಯವು ಅಂತಹ ಅಧ್ಯಯನ ಕೇಂದ್ರದ ವಿರುದ್ಧ ಕಠಿಣ ಕ್ರಮಕೈಗೊಳ್ಳಲಾಗುವುದು.
3. ಪ್ರಸಕ್ತ ಸಾಲಿನಲ್ಲಿ ತಮ್ಮ ಅಧ್ಯಯನ ಕೇಂದ್ರದಲ್ಲಿ ಪ್ರವೇಶ ಪಡೆದಂತಹ ಸ್ನಾತಕ (ದ್ವಿತೀಯ/ತೃತೀಯ) ಹಾಗೂ ಸ್ನಾತಕೋತ್ತರ (ದ್ವಿತೀಯ) ಪದವಿಯ ವಿದ್ಯಾರ್ಥಿಗಳು ಪ್ರಸಕ್ತ ಸಾಲಿನಲ್ಲಿ ನಡೆಸುವ ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು ಮತ್ತು ಪ್ರಾಯೋಗಿಕ ಪರೀಕ್ಷೆಗಳನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕು. ಒಂದು ವೇಳೆ ವಿದ್ಯಾರ್ಥಿಯು ಅನಿವಾರ್ಯ ಕಾರಣದಿಂದ ಪ್ರಾಯೋಗಿಕ ತರಗತಿ ಹಾಗೂ ಪ್ರಾಯೋಗಿಕ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಸಾಧ್ಯವಾಗದಿದ್ದಲ್ಲಿ, ಅಂತಹ ವಿದ್ಯಾರ್ಥಿಗಳು ಸೂಕ್ತ ಕಾರಣ ನೀಡಿ ಸಂಬಂಧಿಸಿದ ದಾಖಲೆಗಳನ್ನು ಈ ಕಛೇರಿಗೆ ಸಲ್ಲಿಸಿ, ಅನುಮತಿ ಪಡೆದು ನಂತರ ಪ್ರಾಯೋಗಿಕ ತರಗತಿ ಹಾಗೂ ಪ್ರಾಯೋಗಿಕ ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕಾಗಿರುತ್ತದೆ.
4. ಪುನರಾವರ್ತಿತ ವಿದ್ಯಾರ್ಥಿಗಳು ಸಂಪರ್ಕ/ಓರಿಯಂಟೇಷನ್ ತರಗತಿಗಳಿಗೆ ಭಾಗವಹಿಸುವಂತಿಲ್ಲ ಹಾಗೂ IA ಪುಸ್ತಕಗಳನ್ನು ಪುನಃ ಸಲ್ಲಿಸುವಂತಿಲ್ಲ. ಹೆಚ್ಚಿನ ವಿಷಯಗಳಿಗೆ ದೂರ ಶಿಕ್ಷಣ ನಿರ್ದೇಶನಾಲಯದ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

**ಆ. ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳ ವೇಳಾಪಟ್ಟಿಯನ್ನು ಸಲ್ಲಿಸುವ ಕುರಿತು:**

1. ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳನ್ನು 2019-20ನೇ ಸಾಲಿನ ಅಕ್ಟೋಬರ್/ ನವೆಂಬರ್ ಮಾಹೆಯಲ್ಲಿ ನಡೆಸಬೇಕಾಗಿರುತ್ತದೆ. **31 ಅಕ್ಟೋಬರ್, 2019**ಕ್ಕಿಂತ ಮುಂಚಿತವಾಗಿ ನಡೆಸಬಾರದು.

2. ಅಧ್ಯಯನ ಕೇಂದ್ರಗಳು ತಮ್ಮ ಅಧ್ಯಯನ ಕೇಂದ್ರಗಳಲ್ಲಿ ನಡೆಸುವ ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳ ವಿವರವಾದ ವೇಳಾಪಟ್ಟಿಯನ್ನು ದೂರ ಶಿಕ್ಷಣ ನಿರ್ದೇಶನಾಲಯ ನಿಗದಿಪಡಿಸಿರುವ ಮಾದರಿಯಲ್ಲಿ ಸಲ್ಲಿಸಬೇಕು.

3. ದೂರ ಶಿಕ್ಷಣ ನಿರ್ದೇಶನಾಲಯ ಸಿದ್ಧಪಡಿಸಿರುವ ಮಾದರಿಯನ್ನು info@kuvempuuniversitydde.orgಗೆ ಇ-ಮೇಲ್ ಮೂಲಕ ಕೋರಿಕೆ ಸಲ್ಲಿಸಿ, ಪಡೆದುಕೊಳ್ಳಬಹುದಾಗಿರುತ್ತದೆ.

4. ದೂರ ಶಿಕ್ಷಣ ನಿರ್ದೇಶನಾಲಯ ನಿಗದಿಪಡಿಸಿರುವ ಮಾದರಿಯನುಸಾರ ಅಧ್ಯಯನ ಕೇಂದ್ರಗಳು ತಮ್ಮಲ್ಲಿ ನಡೆಸುವ ಸ್ನಾತಕ (ದ್ವಿತೀಯ/ತೃತೀಯ) ಹಾಗೂ ಸ್ನಾತಕೋತ್ತರ (ದ್ವಿತೀಯ) ಪದವಿ ಕೋರ್ಸ್‌ಗಳ ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳ ವಿವರವಾದ ವೇಳಾಪಟ್ಟಿಯನ್ನು ದೂರ ಶಿಕ್ಷಣ ನಿರ್ದೇಶನಾಲಯಕ್ಕೆ ಲಗತ್ತಿಸಿ ಕಳುಹಿಸಿಕೊಡಬೇಕಾಗಿರುತ್ತದೆ.

5. ಅಧ್ಯಯನ ಕೇಂದ್ರಗಳು ಸಲ್ಲಿಸುವ ವಿವರದಲ್ಲಿ ದಿನಾಂಕ, ಸಮಯ ಮತ್ತು ಸಂಯೋಜಿತ ಕಾಲೇಜಿನ ಹೆಸರು, ವಿಳಾಸ ಹಾಗೂ ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳನ್ನು ನಡೆಸುವ ಬಾಹ್ಯ (External) ಹಾಗೂ ಆಂತರಿಕ (Internal) ಪರೀಕ್ಷಕರ ಹೆಸರು, ಹುದ್ದೆ, ವಿಳಾಸ ಮತ್ತು ಸೇವಾ ವಿವರ ಕಡ್ಡಾಯವಾಗಿ ನಮೂದಿಸಬೇಕಾಗಿರುತ್ತದೆ.

6. ಮೇಲೆ ತಿಳಿಸಿದ ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳ ವೇಳಾಪಟ್ಟಿ ಹಾಗೂ ದೂರ ಶಿಕ್ಷಣ ನಿರ್ದೇಶನಾಲಯ ನಿಗದಿಪಡಿಸಿರುವ ಮಾದರಿಯನುಸಾರ ಸಿದ್ಧಪಡಿಸಿದ ಪಟ್ಟಿಯನ್ನು ತಮ್ಮ ಅಧ್ಯಯನ ಕೇಂದ್ರದಲ್ಲಿ ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳನ್ನು ಪ್ರಾರಂಭಿಸುವ 10 ದಿನಗಳ ಮುಂಚಿತವಾಗಿ ದೂರ ಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸಿ, ಅನುಮೋದನೆಯನ್ನು ಪಡೆದುಕೊಳ್ಳಬೇಕಾಗಿರುತ್ತದೆ.

7. ದೂರ ಶಿಕ್ಷಣ ನಿರ್ದೇಶನಾಲಯದ ಪೂರ್ವಾನುಮತಿ ಪಡೆದ ನಂತರವೇ ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳನ್ನು ಪ್ರಾರಂಭಿಸಬೇಕಾಗಿರುತ್ತದೆ.

8. ನಿರ್ದೇಶಕರು, ದೂರ ಶಿಕ್ಷಣ ನಿರ್ದೇಶನಾಲಯ ಇವರಿಂದ ಪೂರ್ವಾನುಮತಿ ಪಡೆಯದೇ ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳನ್ನು ನಡೆಸಿದಲ್ಲಿ, ಅಂತಹ ತರಗತಿಗಳು ನಡೆದಿಲ್ಲ ಎಂದು ಭಾವಿಸಲಾಗುತ್ತದೆ ಹಾಗೂ ವಿದ್ಯಾರ್ಥಿಗಳ ಹಾಜರಾತಿ ಅಂಕಗಳನ್ನು IA ಅಂಕಗಳೊಂದಿಗೆ ಸೇರಿಸಲಾಗುವುದಿಲ್ಲ. ಇದರಿಂದ ಆಗುವ ಅನಾನುಕೂಲಗಳಿಗೆ ಅಧ್ಯಯನ ಕೇಂದ್ರದ ಕೋ-ಆರ್ಡಿನೇಟರ್/ ಕೋರ್ಸ್ ಕೋ-ಆರ್ಡಿನೇಟರ್/ ಸಂಚಾಲಕರೇ ಜವಾಬ್ದಾರರಾಗಿರುತ್ತಾರೆ.

9. ವಿಜ್ಞಾನ ವಿಷಯದ ವಿದ್ಯಾರ್ಥಿಗಳು ಸಂಪರ್ಕ ತರಗತಿಗಳು/ ಪ್ರಾಯೋಗಿಕ ತರಗತಿಗಳಿಗೆ ಕಡ್ಡಾಯವಾಗಿ ಹಾಜರಾಗಬೇಕಾಗಿರುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಅಧ್ಯಯನ ಕೇಂದ್ರದವರು ಸಿದ್ಧಪಡಿಸಿರುವ ವೇಳಾಪಟ್ಟಿಯನುಸಾರ ತರಗತಿಗಳಿಗೆ ಹಾಜರಾಗಬೇಕಾಗಿರುತ್ತದೆ ಹಾಗೂ ಅಧ್ಯಯನ ಕೇಂದ್ರದವರು ಸಂಬಂಧಪಟ್ಟ ವಿದ್ಯಾರ್ಥಿಗಳ ಹಾಜರಾತಿಯನ್ನು ನಿಯಮಾನುಸಾರ ಗಣನೆಗೆ ತೆಗೆದುಕೊಳ್ಳಬೇಕಾಗಿರುತ್ತದೆ

10. ಯಾವುದೇ ವಿದ್ಯಾರ್ಥಿ ಸಂಪರ್ಕ ತರಗತಿಗಳು/ ಪ್ರಾಯೋಗಿಕ ತರಗತಿಗಳಿಗೆ ಹಾಜರಾಗದಿದ್ದಲ್ಲಿ, ಅಂತಹ ವಿದ್ಯಾರ್ಥಿಗಳನ್ನು ಪ್ರಾಯೋಗಿಕ ಹಾಗೂ ಸೈದ್ಧಾಂತಿಕ ಪರೀಕ್ಷೆಗಳಿಗೆ ಅನರ್ಹಗೊಳಿಸಲಾಗುವುದು.

11. ನೌಕರರು ಸಂಪರ್ಕ ತರಗತಿಗಳು/ ಓರಿಯಂಟೇಷನ್ ಹಾಗೂ ಪ್ರಾಯೋಗಿಕ ತರಗತಿಗಳಿಗೆ ಹಾಜರಾಗುವಾಗ ಅವರ ಇಲಾಖೆಯಲ್ಲಿ ರಜೆ ಹಾಕಿಕೊಂಡಿರಬೇಕಾಗುತ್ತದೆ.

**ಇ. ಹಾಜರಾತಿ ವಿವರ:**

ಸಂಪರ್ಕ ತರಗತಿಗಳು/ ಪ್ರಾಯೋಗಿಕ ತರಗತಿಗಳಿಗೆ ಹಾಜರಾದ ವಿದ್ಯಾರ್ಥಿಗಳ ಹಾಜರಾತಿಯನ್ನು ನಿಗದಿತ ನಮೂನೆಯಲ್ಲಿ ಸಿದ್ಧಪಡಿಸಿ, ಸಂಪರ್ಕ ತರಗತಿಗಳು/ ಪ್ರಾಯೋಗಿಕ ತರಗತಿಗಳು ಮುಗಿದ ನಂತರ ದೂರ ಶಿಕ್ಷಣ ನಿರ್ದೇಶನಾಲಯದ ಕಛೇರಿಗೆ ಕಳುಹಿಸಿಕೊಡುವುದು. ವಿದ್ಯಾರ್ಥಿಗಳ ಹಾಜರಾತಿಯನ್ನು ಕಳುಹಿಸಲು ದಿನಾಂಕ:30-11-2019 ಅಂತಿಮ ದಿನಾಂಕವಾಗಿರುತ್ತದೆ.

**ಈ. ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿ ಕುರಿತು:**

ದೂರ ಶಿಕ್ಷಣ ನಿರ್ದೇಶನಾಲಯ ಸಿದ್ಧಪಡಿಸಿರುವ ನಿಗದಿತ ನಮೂನೆಯನ್ನು ಇ-ಮೇಲ್ ಮೂಲಕ ಕೋರಿಕೆ ಸಲ್ಲಿಸಿ, ಪಡೆದುಕೊಂಡು ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿಯನ್ನು ಪ್ರತ್ಯೇಕವಾಗಿ ನಿಗದಿತ ನಮೂನೆಯಲ್ಲಿ ಸಿದ್ಧಪಡಿಸಿ, ದೂರ ಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸಬೇಕು.

**ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿಯು ಈ ಕೆಳಕಂಡ ವಿವರಗಳನ್ನು ಒಳಗೊಂಡಿರಬೇಕು:**

1) ಪ್ರಾಯೋಗಿಕ ಪರೀಕ್ಷೆಯನ್ನು ನಡೆಸುತ್ತಿರುವ ಕಾಲೇಜು/ ಸಂಸ್ಥೆಯ ಹೆಸರು
2) ವಿವಿಧ ಕೋರ್ಸುಗಳ ಪ್ರಾಯೋಗಿಕ ಪರೀಕ್ಷೆಯ ದಿನಾಂಕ ಮತ್ತು ಸಮಯ
3) ಕೋರ್ಸುವಾರು, ವರ್ಷವಾರು ಮತ್ತು ತಂಡವಾರು ಹಾಜರಾಗುತ್ತಿರುವ ವಿದ್ಯಾರ್ಥಿಗಳ ಪಟ್ಟಿ
4) ಪ್ರತಿ ದಿನ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ
5) ಆಂತರಿಕ ಮತ್ತು ಬಾಹ್ಯ ಪರೀಕ್ಷಕರ ಪದನಾಮ, ವಿಳಾಸ, ಮೊಬೈಲ್ ಸಂಖ್ಯೆ, ಇತರೆ ಸಂಬಂಧಪಟ್ಟ ವಿವರಗಳು.

**ಉ. ಇತರೆ ಅಂಶಗಳು:**

1) ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿಯು ಪ್ರಾಯೋಗಿಕ ಪರೀಕ್ಷೆ ನಡೆಸುತ್ತಿರುವ ಕಾಲೇಜು/ ಸಂಸ್ಥೆಯ ಪ್ರಾಂಶುಪಾಲರ ಮೇಲುಸಹಿಯೊಂದಿಗೆ ದೃಢೀಕೃತಗೊಂಡಿರಬೇಕು.
2) ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿಯನ್ನು ಕುಲಸಚಿವರು (ಪರೀಕ್ಷಾಂಗ) ಇವರ ಅನುಮೋದನೆ ಪಡೆಯಲು ಹಾಗೂ ಅಗತ್ಯ ಲೇಖನ ಸಾಮಗ್ರಿಗಳನ್ನು ಸಂಬಂಧಪಟ್ಟ ಅಧ್ಯಯನ ಕೇಂದ್ರಗಳಿಗೆ ರವಾನಿಸಲು ಅನುಕೂಲವಾಗುವಂತೆ ಪರೀಕ್ಷಾ ದಿನಾಂಕಕ್ಕಿಂತ ಕನಿಷ್ಠ 10 ದಿನಗಳ ಮುಂಚಿತವಾಗಿ ದೂರ ಶಿಕ್ಷಣ ನಿರ್ದೇಶನಾಲಯ ಕಛೇರಿಗೆ ಕಳುಹಿಸಿಕೊಡಬೇಕು.
3) **ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿಯ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ. ನಿರ್ದೇಶಕರು, ದೂರ ಶಿಕ್ಷಣ ನಿರ್ದೇಶನಾಲಯ ಇವರ ಪೂರ್ವಾನುಮೋದನೆ ಪಡೆಯದೇ ನಡೆಸುವ ಪ್ರಾಯೋಗಿಕ ಪರೀಕ್ಷೆಗಳನ್ನು ದೂರ ಶಿಕ್ಷಣ ನಿರ್ದೇಶನಾಲಯ ಪರಿಗಣಿಸುವುದಿಲ್ಲ.**
4) ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿಯನ್ನು ದೂರ ಶಿಕ್ಷಣ ನಿರ್ದೇಶನಾಲಯ ಕಛೇರಿಗೆ ಸಲ್ಲಿಸಿ, ಪೂರ್ವಾನುಮೋದನೆ ಪಡೆಯದಿದ್ದಲ್ಲಿ, ಅಧ್ಯಯನ ಕೇಂದ್ರದ ಕೋ-ಆರ್ಡಿನೇಟರ್/ ಕೋರ್ಸ್ ಕೋ-ಆರ್ಡಿನೇಟರ್/ ಸಂಚಾಲಕರು ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿಯನ್ನು ಮತ್ತೊಮ್ಮೆ ಸಿದ್ಧಪಡಿಸಬೇಕು. ಇದರಿಂದ ವಿದ್ಯಾರ್ಥಿಗಳಿಗಾಗುವ ಅನಾನುಕೂಲಗಳಿಗೆ ಅಧ್ಯಯನ ಕೇಂದ್ರದ ಕೋ-ಆರ್ಡಿನೇಟರ್‌ಗಳೇ ಜವಾಬ್ದಾರರಾಗಿರುತ್ತಾರೆ.

**ಊ. ಅಂತಿಮ ದಿನಾಂಕಗಳು:**

1. ಎಲ್ಲಾ ಸಂಪರ್ಕ ತರಗತಿಗಳು/ ಪ್ರಾಯೋಗಿಕ ತರಗತಿಗಳು ಕೊನೆಗೊಳ್ಳುವ **ದಿನಾಂಕ:23-11-2019**.
2. ಹಾಜರಾತಿ ತಃಖ್ತೆಯನ್ನು ದೂರ ಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸಲು ಕೊನೆಯ **ದಿನಾಂಕ:30-11-2019**.
3. ಎಲ್ಲಾ ಪ್ರಾಯೋಗಿಕ ಪರೀಕ್ಷೆಗಳು ಕೊನೆಗೊಳ್ಳುವ **ದಿನಾಂಕ:30-11-2019**.

ದೂರ ಶಿಕ್ಷಣ ನಿರ್ದೇಶನಾಲಯದ ಎಲ್ಲಾ ಅಧ್ಯಯನ ಕೇಂದ್ರಗಳ ಕೋ-ಆರ್ಡಿನೇಟರ್/ ಸಂಚಾಲಕರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲೆ ತಿಳಿಸಿದ ಎಲ್ಲಾ ಅಂಶಗಳನ್ವಯ ದೂರ ಶಿಕ್ಷಣ ನಿರ್ದೇಶನಾಲಯದ ಶೈಕ್ಷಣಿಕ ವೇಳಾಪಟ್ಟಿಯನುಸಾರ ದೂರ ಶಿಕ್ಷಣ ನಿರ್ದೇಶನಾಲಯದ ಸಹಕಾರದೊಂದಿಗೆ ನಿರ್ವಹಿಸಬೇಕಾಗಿ ತಿಳಿಸಲಾಗಿದೆ. ಇದರಿಂದ ನಿಗದಿತ ಸಮಯದಲ್ಲಿ ಸೈದ್ಧಾಂತಿಕ ಪರೀಕ್ಷೆಯನ್ನು ವಿಶ್ವವಿದ್ಯಾಲಯ ನಡೆಸಲು ಅನುಕೂಲವಾಗುತ್ತದೆ ಎಂಬ ಅಂಶವನ್ನು ಈ ಮೂಲಕ ತಿಳಿಸಿದೆ.

ನಿರ್ದೇಶಕರು

ನಿರ್ದೇಶಕರು
ದೂರ ಶಿಕ್ಷಣ ನಿರ್ದೇಶನಾಲಯ
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ-577 451.

ಗೆ,

1. ಕುಲಸಚಿವರು (ಪರೀಕ್ಷಾಂಗ), ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
2. ಘನ ಉಚ್ಛನ್ಯಾಯಾಲಯದ ಮಧ್ಯಂತರ ಆದೇಶದ ಹಿನ್ನೆಲೆಯಲ್ಲಿ ಅನುಮತಿ ಪಡೆದ ಎಲ್ಲಾ ಅಧ್ಯಯನ ಕೇಂದ್ರಗಳ ಕೋ-ಆರ್ಡಿನೇಟರ್‌ಗಳಿಗೆ.

ಪ್ರತಿಗಳು:

1. ಸಂಚಾಲಕರು, ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಕಡೂರು.
2. ಸಂಚಾಲಕರು, ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಐ.ಡಿ.ಎಸ್.ಜಿ. ಕಾಲೇಜು, ಚಿಕ್ಕಮಗಳೂರು.
3. ಅಧೀಕ್ಷಕರು (1) ಮತ್ತು (2), ದೂರ ಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
4. ನಿರ್ದೇಶಕರ ಆಪ್ತ ಸಹಾಯಕರು, ದೂರ ಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5. ಸಂಪರ್ಕಾಧಿಕಾರಿಗಳು, ದೂರ ಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
6. ಎಲ್ಲಾ ವಿಷಯ ನಿರ್ವಾಹಕರು, ದೂರ ಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7. ಕಛೇರಿ ಪ್ರತಿ.